## ಕವಿತೆ




**ಬಿ.ಆರ್. ಲಕ್ಷ್ಮಣರಾವ್**

ಕಲೆ: ಸಂತೋಷ್ ಸಸಿಹಿತ್ಲು


# ಟೈರಿಷಿಯಸ್



ನತದೃಷ್ಟ ಶಾಪಗ್ರಸ್ತ ಕುರುಡನೀತ,
ಪುರಾಣ ಕಾಲದವನು;
ಹೊರಜಗತ್ತಿಗೆ ತಾನು ಕುರುಡನಾದರೂ
ಎಲ್ಲರ ಮೂರೂ ಕಾಲಗಳನ್ನು
ನೋಡಬಲ್ಲವನು,
ಒಳಗಿನೊಳಗಿನ ಸಹಿತ.

ಕಾಡುತ್ತಾರೆ, ಪೀಡಿಸುತ್ತಾರೆ ಮಂದಿ,
ಬೇತಾಳನ ಹಾಗೆ,
ತಿಳಿಯಲು ತಮ್ಮ ಜಾತಕಗಳನ್ನು.
ಬೆದರಿಸುತ್ತಾರೆ
'ಹೇಳದಿದ್ದರೆ ನಿನ್ನ ತಲೆದಂಡ!'

ನಗುತ್ತಾನೆ ಟೈರಿಷಿಯಸ್
ವಿಷಾದದಿಂದ:

'ಹೇಳಿದರೆ ತಾಳಬಲ್ಲದೆ ಲೋಕ
ಬದಲಾಗದ
ತನ್ನ ಗ್ರಹಚಾರವನ್ನು?
ಅದ ಬದಲಿಸುವ ಶಕ್ತಿ
ನನಗಿದ್ದಿದ್ದರೆ!
ಅಯ್ಯೋ, ಇದ್ದಿದ್ದರೆ!'

ಹಲುಬುತ್ತಾನೆ ಟೈರಿಷಿಯಸ್
ಥೇಟ್ ಕವಿಯ ಹಾಗೆ.